**ರಾಮಕೃಷ್ಣ ಮಿಷನ್ ಆಶ್ರಮ**
(ರಾಮಕೃಷ್ಣ ಮಿಷನ್, ಬೇಲೂರು ಮಠದ ಒಂದು ಶಾಖಾಕೇಂದ್ರ)
**ಸೆಕ್ಟರ್ 15-ಬಿ, ಮಧ್ಯ ಮಾರ್ಗ**
**ಚಂಡೀಗಢ -160 015**
ಫೋನ್: 0172 – 2549477
E-mail: rkmachandigarh@gmail.com
Website: www.rkmachandigarh.org



ನಿರ್ಮಿಸಲು ಉದ್ದೇಶಿಸಿರುವ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರ

# ಒಂದು ವಿನಮ್ರ ವಿನಂತಿ

## ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣ

ಆತ್ಮೀಯ ಭಕ್ತಬಾಂಧವರೇ ಹಾಗೂ ಹಿತೈಷಿಗಳೆ,

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 1955ರಲ್ಲಿ ಸ್ಥಾಪಿತವಾಯಿತು. ಅಂದಿನಿಂದ ಚಂಡೀಗಢ ಆಶ್ರಮವು ಶಾಂತಿಯನ್ನರಸಿ ಬರುವವರಿಗೆ ಆಧ್ಯಾತ್ಮಿಕ ಪರಿಹಾರ, ನೆಮ್ಮದಿಯನ್ನು ನೀಡುತ್ತಾ ಬಂದಿದೆ; ಅದಲ್ಲದೆ ಉಚಿತ ವೈದ್ಯಕೀಯ ಸೇವೆ, ಕಾಲೇಜು ವಿದ್ಯಾರ್ಥಿಗಳಿಗಾಗಿ 'ವಿವೇಕಾನಂದ ಸ್ಟೂಡೆಂಟ್ಸ್ ಹೋಮ್' ಎಂಬ ವಿದ್ಯಾರ್ಥಿ ನಿಲಯ, ಶಾಲೆ-ಕಾಲೇಜುಗಳಿಗೆ ಮೌಲ್ಯಶಿಕ್ಷಣ ಕಾರ್ಯಕ್ರಮಗಳು, ಪ್ರೇರಣಾತ್ಮಕ ಹಾಗೂ ಉನ್ನತ ಮೌಲ್ಯಗಳನ್ನು ಹರಡುವ ಸಾಹಿತ್ಯದ ಪ್ರಸರಣ – ಇವೇ ಮೊದಲಾದ ಚಟುವಟಿಕೆಗಳನ್ನು ನಡೆಸುತ್ತಿದೆ.

ಕಳೆದ ಎರಡು ದಶಕಗಳಿಂದ ಈ ಸೇವಾಕಾರ್ಯಗಳು ಸುಸ್ಥಿರವಾಗಿ ವ್ಯಾಪಕಗೊಳ್ಳುತ್ತಿವೆ. ಆಶ್ರಮಕ್ಕೆ ಆಗಮಿಸುವ, ಇಲ್ಲಿನ ದೈನಂದಿನ ಚಟುವಟಿಕೆಗಳಾದ ಬೆಳಗಿನ ಮಂಗಳಾರತಿ, ಸಂಧ್ಯಾರತಿಗಳಲ್ಲಿ ಪಾಲ್ಗೊಳ್ಳುವ ಹಾಗೂ ಇಲ್ಲಿ ನಡೆಯುವ ಧ್ಯಾನ, ತರಬೇತಿ ಶಿಬಿರ, ಸತ್ಸಂಗ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಭಕ್ತರ ಸಂಖ್ಯೆ ಗಣನೀಯವಾಗಿ ವೃದ್ಧಿಗೊಂಡಿದೆ.

ಹೊಸ ಅಗತ್ಯಗಳಿಗೆ ಅನುಗುಣವಾಗಿ ಆಶ್ರಮದಲ್ಲಿ ಈ ಕೆಳಗಿನ ಹೊಸ ಕಟ್ಟಡಗಳ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ:

| | | |
|---|---|---|
| 1) ವಿಶಾಲವಾದ ಧ್ಯಾನಮಂದಿರ ಹಾಗೂ ಸಾಧುನಿವಾಸ | – | 1.3 ಕೋಟಿ ರೂಪಾಯಿ ಅಂದಾಜು ವೆಚ್ಚ |
| 2) ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕೇಂದ್ರ | – | 2.1 ಕೋಟಿ ರೂಪಾಯಿ ಅಂದಾಜು ವೆಚ್ಚ |
| **ಈ ಯೋಜನೆಗೆ ತಗಲಬಹುದಾದ ಒಟ್ಟು ಮೊತ್ತ** | **–** | **3.4 ಕೋಟಿ ರೂಪಾಯಿ ಅಂದಾಜು ವೆಚ್ಚ** |



ರಾಮಕೃಷ್ಣ ಮಹಾಸಂಘದ 11ನೇ ಪರಮಾಧ್ಯಕ್ಷರಾಗಿದ್ದ ಶ್ರೀಮತ್ ಸ್ವಾಮಿ ಗಂಭೀರಾನಂದಜಿ ಮಹಾರಾಜ್ ಅವರು 1985ರ ನವಂಬರ್ 24ರಂದು 'ವಿಶ್ವಭಾವೈಕ್ಯ ಧ್ಯಾನಮಂದಿರ'ದ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿಸುತ್ತಿರುವುದು.



ನೂತನ 'ವಿಶ್ವಭಾವೈಕ್ಯ ಧ್ಯಾನಮಂದಿರ' ಹಾಗೂ ಶೈಕ್ಷಣಿಕ, ಸಾಂಸ್ಕೃತಿಕ ಕೇಂದ್ರದ ನಿರ್ಮಾಣಕಾರ್ಯ ಪ್ರಗತಿಯಲ್ಲಿರುವುದು.

ಈ ಕಾರ್ಯಕ್ಕೆ ದೇಣಿಗೆ ನೀಡಬಯಸುವವರು ಚೆಕ್, ಡಿಡಿ ಇವುಗಳನ್ನು '**RAMAKRISHNA MISSION ASHRAMA, CHANDIGARH**' ಹೆಸರಿನಲ್ಲಿ ತೆಗೆದು, ಆಶ್ರಮದ ವಿಳಾಸಕ್ಕೆ ಕೊರಿಯರ್, ತ್ವರಿತ ಅಂಚೆ (speed post) ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಕಳುಹಿಸಬಹುದು. ನೇರವಾಗಿ ಬ್ಯಾಂಕಿಗೆ ಹಣ ವರ್ಗಾವಣೆ ಮಾಡುವವರಿಗೆ ಖಾತೆ ವಿವರಗಳು:

**1. ICICI A/c No. - 001301029198, Branch - Sector 15-C, Chandigarh, IFSC - ICIC0002429**
**2. IDBI A/c No. - 003104000083216, Branch - Sector 8-C, Chandigarh, IFSC - IBKL0000003**

(ದಯವಿಟ್ಟು ಹಣ ವರ್ಗಾವಣೆ ಮಾಡಿದ ವಿವರ, ನಿಮ್ಮ ವಿಳಾಸ, ಫೋನ್ ನಂ. ಇವುಗಳನ್ನು ಅದೇ ದಿನದಂದು ಇ-ಮೇಲ್ ಮೂಲಕ ನಮಗೆ ತಿಳಿಸಬೇಕಾಗಿ ವಿನಂತಿ)

*ಆಶ್ರಮದ ವಿಳಾಸ:*
**Ramakrishna Mission Ashrama, Sector 15-B, Madhya Marg, Chandigarh - 160015**
Tel: 0172-2549477 E-mail: rkmachandigarh@gmail.com

ಭಗವಾನ್ ಶ್ರೀರಾಮಕೃಷ್ಣರ ಸೇವೆಯಲ್ಲಿ
ಸ್ವಾಮಿ ಸತ್ಯೇಶಾನಂದ
ಕಾರ್ಯದರ್ಶಿಗಳು, ರಾಮಕೃಷ್ಣ ಮಿಷನ್ ಆಶ್ರಮ, ಚಂಡೀಗಢ



ಸಂಪಾದಕೀಯ

# ಅರಿವಿನ ಹಾದಿ

ಪ್ರಾತಃಕಾಲದ ತಣ್ಣನೆ ಗಾಳಿ ಬೀಸುತ್ತಿರುವಾಗ, ನದೀತೀರದಲ್ಲಿ ಮರದ ಕೆಳಗೆ ಕುಳಿತ ಯತಿಯೊಬ್ಬ ಹರಿಯುತ್ತಿರುವ ನೀರನ್ನೆ ದಿಟ್ಟಿಸಿ ನೋಡುತ್ತಿದ್ದಾನೆ. ಅವನ ದೃಷ್ಟಿಗೆ ಗೋಚರವಾಗುತ್ತಿದೆ: ಜುಳು ಜುಳು ನಿನಾದದ, ಥಳಥಳಿಸುವ ಅಲೆಗಳ ನಲಿವಿನೊಂದಿಗೆ ಹರಿಯುವ ನದಿಯ ಸಾಗುವಿಕೆ ಬೇರೇನನ್ನೋ ಸೂಚಿಸುತ್ತಿದೆ. ಯತಿಯ ಅರಿವು ಎಚ್ಚರಗೊಂಡಿತು. ನದಿಯ ನೀರು ಕೇವಲ ನೀರಲ್ಲ ; ನಿರಂತರ ಸಾಗುತ್ತಿರುವ ನಶ್ವರ ಜಗತ್ತಿನ ಸಂಕೇತ. ಎಷ್ಟೇ ಸುಂದರವಿರಲಿ, ಎಷ್ಟೇ ಜೀವಂತವೆನಿಸಲಿ, ಕಣ್ಣಿಗೆ ಕಾಣುವ ಜಗತ್ತೆಲ್ಲವೂ ಹೀಗೇ ತಾನೆ? ಎಲ್ಲಿಂದಲೋ ಅಸ್ತಿತ್ವಕ್ಕೆ ಬರುತ್ತವೆ, ಕೆಲವು ಕಾಲ ಕಾಣಿಸುತ್ತವೆ, ಮುಂದೊಮ್ಮೆ ಕಣ್ಮರೆಯಾಗುತ್ತವೆ. ತಾನೂ ಅಷ್ಟೆ, ತನ್ನ ದೇಹ, ಜೀವನ, ನೆನಪು, ಮಾನವ ಜನ್ಮ – ಇವೆಲ್ಲವೂ ಈ ಜಗತ್ತಿನ ಒಂದು ಭಾಗ. ಎಲ್ಲಿಂದಲೋ ಬಂದಿವೆ; ಎಲ್ಲಿಗೋ ಸಾಗುತ್ತಿವೆ. ಸಕಲವೂ ವಿನಾಶದೆಡೆಗೆ ಸಾಗುತ್ತಿರಬೇಕಾದರೆ, ಅವೆಲ್ಲವನ್ನೂ ಸಾಕ್ಷಿಯಂತೆ ನೋಡುತ್ತಿರುವ ಒಂದು ವಸ್ತು ಇರಬೇಕಲ್ಲವೆ? ಹೀಗೆ ನೋಡುತ್ತಿರುವ ನಾನು ಉಳಿದೆಲ್ಲಕ್ಕಿಂತಲೂ ಬೇರೆಯಲ್ಲವೆ? – ಈ ರೀತಿ ವಿಚಾರ ಮಾಡುತ್ತ, ಯತಿ ತನ್ನದೇ ಧ್ಯಾನದಲ್ಲಿ ಮುಳುಗಿದ. ಆತ್ಮಚಿಂತನೆ ಅವನಿಗೆ ಸತ್ಯದ ಬೇರೊಂದು ನೆಲೆಯನ್ನೇ ತೋರಿಸಿಕೊಟ್ಟಿತು.

## ಹಳೆಯ ಮಾರ್ಗ

ವಿಚಾರದ ಮೂಲಕ ಸತ್ಯವನ್ನು ಕಂಡುಕೊಳ್ಳುವ ವಿಧಾನ ಇಂದು ನಿನ್ನೆಯದಲ್ಲ. ಮಾನವನು ಪ್ರಪಂಚದಲ್ಲಿ ತನ್ನ ಆಧಿಪತ್ಯವನ್ನು ಸ್ಥಾಪಿಸಿದ್ದೇ ತನ್ನ ಬುದ್ಧಿಶಕ್ತಿಯಿಂದ. ಆದರೆ ಅವನ ಬುದ್ಧಿಯ ಬಳಕೆ ಕೇವಲ ಸತ್ಯಾನ್ವೇಷಣೆಗಾಗಿ ಬಳಕೆಯಾದದ್ದಲ್ಲ ; ಹತ್ತು ಹಲವು ಕಡೆ ಅದರ ಗಮನ ಹರಿಯಿತು. ಬೇರೆಲ್ಲ ಕುತೂಹಲಗಳನ್ನು ಬದಿಗಿಟ್ಟು , ಸತ್ಯದ ಮೂಲಸ್ವರೂಪವನ್ನಷ್ಟೇ ಕಾಣಬೇಕು ಎಂದು ಹೊರಟವರು ಮಾತ್ರ ಉಳಿದವರಿಗಿಂತ ಬೇರೆ ಹಾದಿಯನ್ನು ತುಳಿದರು. ಅದು ಸತ್ಯದ ಹಾದಿ; ಕೇವಲ ಅರಿವಿನ ಹಾದಿ. ಹೊರಗೆಲ್ಲೋ ಕಾಣಿಸದ ಸತ್ಯ ತನ್ನೊಳಗೆ ಗೋಚರವಾಯಿತು. ಬಾಹ್ಯಜಗತ್ತಿನಲ್ಲಿ ಕಾಣಿಸದ ಅಂತಿಮ ಸತ್ಯ ತನ್ನೊಳಗೆಯೇ ಇದೆಯೆಂದು ಕಂಡುಬಂತು. ಇದು ಅಂತಿಂಥ ಶೋಧವೇನಲ್ಲ , ಇಡೀ ಪ್ರಪಂಚವನ್ನೇ ಮಾರ್ಪಡಿಸುವ, ತನ್ನೊಳಗು-ಹೊರಗನ್ನೆಲ್ಲ ತುಂಬುವ, ಹೊಸ ದಿವ್ಯಲೋಕವನ್ನೇ ತೆರೆಯುವ ಅಪೂರ್ವಶೋಧ! ತನಗೆ ಕಾಣಿಸದ ಹೊಸ ದಾರಿಯನ್ನು ಕಂಡ ಆ ಮಹಾತ್ಮ ಆಶ್ಚರ್ಯದಿಂದ ಉದ್ಗರಿಸಿದ:

**ವೇದಾಹಮೇತಂ ಪುರುಷಂ ಮಹಾಂತಂ**
**ಆದಿತ್ಯವರ್ಣಂ ತಮಸಃ ಪರಸ್ತಾತ್ ।**
**ತಮೇವ ವಿದಿತ್ವಾ ಅತಿಮೃತ್ಯುಮೇತಿ**
**ನಾನ್ಯಃ ಪಂಥಾ ವಿದ್ಯತೇಽಯನಾಯ॥**

(‘ಅಜ್ಞಾನವೆಂಬ ಅಂಧಕಾರದಿಂದ ಆಚೆಗಿರುವ ಪ್ರಕಾಶಸ್ವರೂಪನಾದ, ಮಹಾನ್ ಆದ ಆ ಪುರುಷನನ್ನು ನಾನು ಅರಿತಿರುತ್ತೇನೆ. ಅವನನ್ನು ಅರಿತುಕೊಂಡವನು ಮೃತ್ಯುವನ್ನು ದಾಟುತ್ತಾನೆ. ಪರಮಪದ ಪ್ರಾಪ್ತಿಗೆ ಇದಕ್ಕಿಂತ ಬೇರೆ ದಾರಿಯಿಲ್ಲ’, *ಶ್ವೇತಾಶ್ವತರೋಪನಿಷತ್ತು, ೩.೮* ) ತನಗೆ ಗೋಚರವಾದ ಸತ್ಯ ಅಸಾಧಾರಣವೂ, ಅಲೌಕಿಕವೂ ಆಗಿದೆಯೆಂಬುದನ್ನು ಅರಿತುಕೊಂಡ ಅವನು ಅಲ್ಲಿಗೇ ಸುಮ್ಮನಾಗಲಿಲ್ಲ ; ಇತರರಿಗೂ ಅದನ್ನೇ ಸಾರಿ ಹೇಳಿದ. ಈ ಒಂದು ಸತ್ಯವನ್ನು ಕಾಣುವ ದಾರಿಯನ್ನೂ ಹೇಳಿಕೊಟ್ಟ. ಆದರೆ ಈ ದಾರಿ ಅತ್ಯಂತ ಆಶ್ಚರ್ಯಕರವಾದದ್ದು – ಅದು ಅಂತರಂಗದ ಹಾದಿ, ಅರಿವಿನ ಹಾದಿ. ಇದನ್ನರಿಯಲು ಪ್ರತಿಯೊಬ್ಬನೂ ತನ್ನ ಅಂತರಂಗವನ್ನು ಹೊಕ್ಕು, ಆಳದಲ್ಲಿ ಮುಳುಗಿ ಶೋಧಿಸಬೇಕು. ಪರಿಶುದ್ಧವಾದ ಜ್ಞಾನ ಸತ್ಯವನ್ನು ಪ್ರಕಾಶಪಡಿಸುತ್ತದೆ. ಪರಮಸತ್ಯವನ್ನು ಕಾಣಲು ಇದೊಂದೇ ದಾರಿ, ಈ ವಿಚಾರವನ್ನೇ ಮೇಲೆ ಹೇಳಿದೆ.

ಇತಿಹಾಸವು ನಿಗದಿಗೊಳಿಸಲಾಗದಷ್ಟು ಪ್ರಾಚೀನ ಕಾಲದಲ್ಲಿ ನಮ್ಮ ಋಷಿಗಳು ಕಂಡುಕೊಂಡ ಸತ್ಯದ ಪಥವಿದು. ಏಕಾಂತ, ಧ್ಯಾನ, ತಪಸ್ಸುಗಳ ಮೂಲಕ ಸತ್ಯಸಾಕ್ಷಾತ್ಕಾರವನ್ನು ಹೊಂದುವ ಬಗೆಯನ್ನು ಬಾಲ್ಯದಿಂದಲೇ ಆರಂಭಿಸುವ ಪದ್ಧತಿ ಹೀಗೆ ಆರಂಭ

ವಾಯಿತು. ಆಶ್ರಮಗಳಲ್ಲಿ , ಗುರುಕುಲಗಳಲ್ಲಿ ವಿದ್ಯಾರ್ಥಿಗಳಿಗೆ ಏಕಾಗ್ರತೆ, ಅಧ್ಯಯನ, ಧ್ಯಾನಗಳನ್ನು ಬೋಧಿಸುತ್ತ, ಅದರೊಂದಿಗೆ ವೈದಿಕ ಕರ್ಮಾನುಷ್ಠಾನವನ್ನೂ ಮಾಡುತ್ತ, ಅವರು ಬೆಳೆಯಬೇಕಾಗಿತ್ತು. ಉನ್ನತ ಜೀವನಕ್ಕೆ ಅಗತ್ಯವಾದ ಸಂಸ್ಕಾರವನ್ನು ನೀಡುವ, ಆಧ್ಯಾತ್ಮಿಕ ಜೀವನವನ್ನು ನಡೆಸಲು ಮಾನವನನ್ನು ಸಿದ್ಧಗೊಳಿಸುವ ಒಂದು ಪದ್ಧತಿ ಈ ಮೂಲಕ ಬೆಳೆದು ಬಂತು. ಇಂದಿನ ಸಾರ್ವಜನಿಕ ವಿದ್ಯಾಭ್ಯಾಸದಂತೆ ಈ ಕ್ರಮ ಸರ್ವತ್ರ ವ್ಯಾಪಕವಾಗದೆ ಇದ್ದಿರಬಹುದು; ಆದರೆ ಇಂಥ ಒಂದು ಪದ್ಧತಿ ಜಗತ್ತಿನಲ್ಲಿ ಮೂಡಿಬಂದಿದೆಯಲ್ಲ ; ಅದೇ ವಿಶೇಷ. ಸಂಸ್ಕಾರ, ಅಭ್ಯಾಸ ಹಾಗೂ ಉಪಾಸನೆಗಳೊಂದಿಗೆ ಗುರುವಿನ ಮಾರ್ಗದರ್ಶನದಲ್ಲಿ ಪಡೆಯುವ ಶಿಕ್ಷಣ ಸಾಮಾನ್ಯ ಶಿಕ್ಷಣವಾಗಿರದೆ, ಮಾನವನು ಅರಿವಿನ ವಿಕಾಸದಲ್ಲಿ ಉನ್ನತ ಹಂತವನ್ನೇರಲು ಅಗತ್ಯವಾದ ಸಿದ್ಧತೆ ಅದಾಗಿತ್ತು. ಹೀಗೆ ಜ್ಞಾನಪ್ರಕ್ರಿಯೆ ವೈಯಕ್ತಿಕವಾಗಿ ನಡೆಯುವ ಕಾರ್ಯವಾಗಿದ್ದರೂ, ಅದು ವ್ಯಕ್ತಿಯಿಂದ ವ್ಯಕ್ತಿಗೆ ಪ್ರೇರಣೆ-ಪೋಷಣೆಗಳ ಮೂಲಕ ವ್ಯಾಪಕಗೊಳ್ಳುವ ಒಂದು ಸಾಮಾಜಿಕ ಬಗೆಯೂ ಹೌದು ಎಂಬ ಸತ್ಯ ಅತಿ ಪ್ರಾಚೀನ ಕಾಲದಲ್ಲೇ ಬೆಳಕಿಗೆ ಬಂತು. ಸಾಮಾನ್ಯ ವಿದ್ಯಾಭ್ಯಾಸದ ಈ ಕ್ರಮ ಅಧ್ಯಾತ್ಮದಲ್ಲೂ ಬಳಕೆಯಾಯಿತು; ಆದರೆ ಅಲ್ಲಿ ವೈಯಕ್ತಿಕ ಪ್ರಯತ್ನಕ್ಕೆ ಹೆಚ್ಚಿನ ಮಹತ್ವ ನೀಡಿದರು.

ಪ್ರಾಚೀನ ಋಷಿಗಳಾಗಿರಲಿ, ಬುದ್ಧ , ಶ್ರೀಕೃಷ್ಣ , ಶ್ರೀಶಂಕರರಂಥ ಮಹಾಪುರುಷರಾಗಿರಲಿ ಸತ್ಯದರ್ಶನಕ್ಕೆ ಅರಿವಿನ ಮಾರ್ಗವನ್ನು ಅನುಸರಿಸಬೇಕು ಎಂದು ಬೋಧಿಸಿದರು. ಜ್ಞಾನ, ಭಕ್ತಿ, ಕರ್ಮ ಮೊದಲಾದ ಆಧ್ಯಾತ್ಮಿಕ ವಿಧಾನಗಳು ಇನ್ನೂ ರೂಪುಗೊಳ್ಳುವ ಮೊದಲು, ಮಾನವನ ಶ್ರೇಯಸ್ಸು ವಿವೇಕದಿಂದಲೇ ಉಂಟಾಗುವುದು, ತನ್ನನ್ನು ತಾನು ಅರಿತವನಿಗೆ ಎಲ್ಲ ಸತ್ಯವೂ ಗೋಚರಿಸುವುದು ಎಂಬ ಭಾವನೆ ಪ್ರಚಲಿತವಾಗಿತ್ತು. ಮುಂದೆ ಭಕ್ತಿಪಂಥಗಳ ಉದಯ ಹಾಗೂ ಪ್ರಚಾರ ಹೆಚ್ಚಾಯಿತು; ಷಡ್ದರ್ಶನಗಳ ಪ್ರಭಾವ ವ್ಯಾಪಕವಾಯಿತು. ಆಗ ಜ್ಞಾನಮಾರ್ಗದಂತೆಯೇ ಇತರ ಮಾರ್ಗಗಳೂ ಸತ್ಯದರ್ಶನಕ್ಕೆ ಪ್ರಧಾನ ಮಾಧ್ಯಮಗಳಾದವು.

### ವಿಚಾರ : ಇದೂ ಒಂದು ಮಾರ್ಗವೆ?

ಜ್ಞಾನಮಾರ್ಗವನ್ನು ಒಂದು ಆಧ್ಯಾತ್ಮಿಕ ಮಾರ್ಗವೆಂದು ಒಪ್ಪದವರೂ ಇದ್ದಾರೆ. 'ಭಕ್ತಿ, ಯೋಗ, ಕರ್ಮ ಮಾರ್ಗಗಳಲ್ಲೆಲ್ಲ ಉಪಾಸನೆ, ಧ್ಯಾನ, ನಿಷ್ಕಾಮಕರ್ಮ ಮೊದಲಾದ ವಿಧಾನಗಳಿಂದ ಭಗವಂತನನ್ನು ಕಂಡುಕೊಳ್ಳಬಹುದು. ಆದರೆ ಜ್ಞಾನದ ಮೂಲಕ ಸತ್ಯದರ್ಶನ ಹೇಗೆ ಸಾಧ್ಯ? ವಿಚಾರದ, ತರ್ಕದ ಮೂಲಕ ಆತ್ಮನನ್ನು ಅರಿಯಲಾಗದು ಎಂದು ಉಪನಿಷತ್ತುಗಳೇ ಹೇಳುತ್ತವೆ. ಆದ್ದರಿಂದ ಅದೊಂದು ಮಾರ್ಗವೇ ಅಲ್ಲ' ಎನ್ನುವ ಅಭಿಪ್ರಾಯಗಳಿವೆ. ಆದರೆ ಜ್ಞಾನಮಾರ್ಗವನ್ನು ಅನುಸರಿಸಿ ಸಾಕ್ಷಾತ್ಕಾರ ಹೊಂದಿದ ಮಹಾಪುರುಷರ ಅನೇಕ ಉದಾಹರಣೆಗಳು ನಮ್ಮಲ್ಲಿವೆ. ಉಪನಿಷತ್ತುಗಳಲ್ಲಿ ಕಂಡುಬರುವ ಆತ್ಮವಿಶ್ಲೇಷಣೆಯ ನಿದರ್ಶನಗಳು, ವಿಚಾರವೆಂಬುದು ಕ್ರಮೇಣ ಧ್ಯಾನದಲ್ಲಿ ಲಯವಾಗುವ ಬಗೆಯನ್ನು ಚಿತ್ರಿಸುತ್ತವೆ. ಅದ್ವೈತ ಪರಂಪರೆಯ 'ನೇತಿ, ನೇತಿ ವಿಧಾನ' (ನಮ್ಮ ಅರಿವಿಗೆ ಬರುವ ಪ್ರತಿಯೊಂದು ವಸ್ತುವನ್ನೂ 'ಇದು ನಾನಲ್ಲ, ಇದು ನಾನಲ್ಲ' ಎಂದು ನಿಷೇಧಿಸಿ, ಕೊನೆಗೆ ನಮ್ಮ ಆತ್ಮನನ್ನು ಕಂಡುಕೊಳ್ಳುವ ಬಗೆ) *ದೃಗ್-ದೃಶ್ಯ-ವಿವೇಕ* ದಲ್ಲಿ ವಿವರಿಸಿರುವ ಸಾಕ್ಷೀಭಾವದ ಅಭ್ಯಾಸ, *ವಿವೇಕಚೂಡಾಮಣಿ*ಯಲ್ಲಿ ಹೇಳಿರುವ ಸಾಧನ ಚತುಷ್ಟಯ, ಶ್ರೀರಮಣ ಮಹರ್ಷಿಗಳ 'ನಾನು ಯಾರು?' ಎಂಬುದನ್ನು ಕಂಡುಕೊಳ್ಳುವ ವಿಧಾನ – ಇವೆಲ್ಲ ಜ್ಞಾನಮಾರ್ಗದ ಹಲವು ವಿಧಾನಗಳು. ಸಾಧನೆಯ ಒಂದು ಹಂತವನ್ನು ಮೀರಿದಾಗ ಜ್ಞಾನವೇ ಧ್ಯಾನವಾಗುತ್ತದೆ. ಸತ್ಯದರ್ಶನದ ಹಾದಿಯಲ್ಲಿ ಎಲ್ಲ ಪಥಗಳೂ ಒಂದುಗೂಡುತ್ತವೆ ಎಂಬ ಸ್ವಾಮಿ ಯತೀಶ್ವರಾನಂದರ ಮಾತು ಇಲ್ಲಿ ಮುಖ್ಯವೆನಿಸುತ್ತದೆ. (*The Divine Life,* 1972, RK Math, Chennai, p.41)

ಭಕ್ತಿ, ಕರ್ಮ, ಯೋಗವೇ ಮೊದಲಾದ ಮಾರ್ಗಗಳಲ್ಲೂ ಜ್ಞಾನ, ವಿವೇಕ, ವಿಚಾರ ಪ್ರಧಾನ ಪಾತ್ರವಹಿಸುತ್ತವೆ. ಭಕ್ತನ ಸಾಧನೆ ಭಾವಪ್ರಧಾನವಾದರೂ, ನಿರಂತರ ತನ್ನ ಇಷ್ಟದೇವತೆಯನ್ನು ಚಿಂತಿಸುವ ಪ್ರಕ್ರಿಯೆಯಲ್ಲಿ, ದೇವರಲ್ಲದ್ದನ್ನು ಹಾಗೂ ದೇವರಿಗೆ ವಿರುದ್ಧವಾದದ್ದನ್ನು ತ್ಯಜಿಸುವುದು ಸಹಜ. ಆಗ ಅದರೊಂದಿಗೆ ವಿಚಾರ, ವಿವೇಚನೆ, ತಾನಾಗಿಯೇ ಜೊತೆಗೂಡುತ್ತದೆ. ಆದರೆ ದೈವೀಸ್ವರೂಪದಿಂದ ತನ್ನನ್ನು ದೂರಕ್ಕೆ ಒಯ್ಯುವ ತರ್ಕ ಅಥವಾ ವಿಚಾರ ತನಗೆ ಅನಗತ್ಯವೆಂದೇ ಭಕ್ತನು ತಿಳಿಯುತ್ತಾನೆ. ಈ ಅರ್ಥದಲ್ಲೇ ಶ್ರೀರಾಮಕೃಷ್ಣರು ಹೇಳುತ್ತಾರೆ, ''ಜ್ಞಾನಿಗಳ ಮಾರ್ಗ ವಿಚಾರಮಾರ್ಗ. ವಿಚಾರ ಮಾಡುತ್ತ ಮಾಡುತ್ತ ಒಮ್ಮೊಮ್ಮೆ ನಾಸ್ತಿಕ ಭಾವ ಬಂದುಬಿಡಬಹುದು. ಭಗವಂತನ ಸಾಕ್ಷಾತ್ಕಾರಕ್ಕಾಗಿ ನಿಜವಾಗಿ ವ್ಯಾಕುಲನಾಗಿರುವ ಭಕ್ತನ ಹೃದಯವನ್ನು ನಾಸ್ತಿಕ ಭಾವನೆಗಳು ಹೊಕ್ಕರೂ, ಆತ ಭಗವಚ್ಚಿಂತನೆ ಮಾಡುವುದನ್ನು ಬಿಡುವುದಿಲ್ಲ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೨೦೪)* ಆದರೆ ಭಕ್ತಿಯಿಂದುಂಟಾಗುವ ಭಾವಾತಿರೇಕದ ಅಪಾಯವನ್ನು ತಪ್ಪಿಸಲು ಜ್ಞಾನದ ಬೆಂಬಲ ಅಗತ್ಯವೆಂದೂ, ಜ್ಞಾನ-ವಿಚಾರಗಳ ಒಣಭಾವವನ್ನು ದೂರ ಮಾಡಲು ಭಕ್ತಿ, ಪ್ರೇಮದ ಬಲ ಅಗತ್ಯವೆಂದೂ ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಹೀಗೆ ಭಕ್ತಿ, ಜ್ಞಾನಗಳ ಸಮನ್ವಯದಿಂದ ಸಾಧಕನ ಯಾನ ಸುರಕ್ಷಿತವಾಗಿ ಸಾಗುವುದು. ಸಾಧಕನು ಪ್ರಧಾನವಾಗಿ ಭಕ್ತನಾಗಿರಲಿ, ಜ್ಞಾನಿಯಾಗಿರಲಿ, ಕರ್ಮಯೋಗಿಯಾಗಿರಲಿ – ಇತರ ಮಾರ್ಗಗಳಲ್ಲಿರುವ ವಿಶೇಷ ಉಪಯೋಗವನ್ನು ಪಡೆದು ಮುನ್ನಡೆಯಬಹುದು; ಆದರೆ ತನ್ನ ಮಾರ್ಗ ಹಾಗೂ ತನ್ನ ವಿಧಾನವನ್ನೇ ಅವನು ಬಲವಾಗಿ ಹಿಡಿದುಕೊಳ್ಳಬೇಕಾಗುವುದು.

ವಿಚಾರಮಾರ್ಗ, ಒಣವೇದಾಂತ ನಿಸ್ಸಾರವೆಂದು ಕೆಲವರ ಅಭಿಪ್ರಾಯ. ಒಂದೇ ಬಗೆಯ ಆತ್ಮಚಿಂತನೆ ಮಾಡುವವರಿಗೆ ಭಕ್ತಿಯೇ ಮೊದಲಾದ ಮಾರ್ಗಗಳಲ್ಲಿರುವ ಭಾವವೈವಿಧ್ಯ, ಭಕ್ತಿಯ ನೂರು ಬಗೆಗಳಲ್ಲಿರುವ ಸೌಂದರ್ಯ, ಮಾಧುರ್ಯಗಳು ಲಭಿಸಲಾರವು; ಕ್ರಮೇಣ ಅವರು ದೈವೀಪಥದಿಂದ ದೂರವಾಗುವರು ಎಂದು ಅವರು ಹೇಳುತ್ತಾರೆ. ಯಾರ ಮನೋಭಾವ ವಿಚಾರ ಪ್ರಧಾನವಲ್ಲವೋ ಅವರಿಗೆ ಹೀಗಾಗಬಹುದು; ಆದರೆ ನಿಜವಾದ ಜ್ಞಾನಿಗೆ